



ಈಗ ಅಂದಿನ ‘ಅವಶ್ಯಕತೆ’ ಫ್ಯಾಷನ್ ಆಗಿ ಮಾರ್ಪಟ್ಟಿದೆ. ಸೀರೆ ಉಟ್ಟಾಗ ಬೆಳ್ಳಿಯ ಕೀ ಬಂಚ್ ತರಹದ ಕಟಿಯಾಭರಣ ಸಖತ್ ಲುಕ್ ಕೊಡುತ್ತಿದೆ. ಇದರಲ್ಲಿ ಅದ್ಭುತ ವಿನ್ಯಾಸಗಳೂ ಇವೆ.

- ಜುಮುಕ ಕೀ ಬಂಚ್
- ಲೋಲಕ್ ಕೀ ಬಂಚ್
- ಬೆಳ್ಳಿ ಚೈನ್ ಕೀ ಬಂಚ್
- ಬಂಗಾರ ಪದಕದ ಕೀ ಬಂಚ್

## ಸೊಂಟದ ಕೀ ಬಂಚ್

ಇದೊಂದು ವಿಶೇಷ ಆಭರಣ. ಸೊಂಟದಲ್ಲಿ ಒಂದು ಬೆಲ್ಟ್ ಅಥವಾ ಬಳ್ಳಿ, ಇಲಾಸ್ಟಿಕ್ ಹೊಂದಿದ ಬಟ್ಟೆ ಆಗಿರಬೇಕು. ಏಕೆಂದರೆ ಈ ಸೊಂಟದ ಕೀ ಬಂಚ್ ಅನ್ನು ಒಂದು ಕೀಲಿನ ಸಹಾಯದಿಂದ ಬಟ್ಟೆಯ ಭಾಗಕ್ಕೆ ಸಿಕ್ಕಿಸಬೇಕು. ಕೆಳಗೆ ಅದರ ವಿನ್ಯಾಸ ಸುಂದರವಾಗಿ ಓಲಾಡಿಕೊಂಡಿದ್ದರೆ ಚಂದ. ಸಾಧಾರಣ ಬೆಳ್ಳಿಯ ಸೊಂಟದ ಆಭರಣ ಬಳಕೆಯಲ್ಲಿ ಜಾಸ್ತಿ ಇದೆ. ಏಕೆಂದರೆ ಕೀಗಳು ಇದ್ದೇ ಇದನ್ನು ಧರಿಸಬೇಕೆಂದಿಲ್ಲ. ವಿನ್ಯಾಸವನ್ನು ನಮಗೆ ಬೇಕಾದಂತೆ ಬದಲಾಯಿಸಿ ಹೊಸತನ ತುಂಬಿ ಧರಿಸಬಹುದು.

ಕೀ ಬಂಚ್‌ನಲ್ಲೂ ಎನಾಮಲ್ ಪೇಂಟ್ ಹಾಕಿದ ವಿನ್ಯಾಸದ್ದು ಇದೀಗ ಬಂದಿದೆ. ಸಾಧಾರಣವಾಗಿ ಇವುಗಳು ಹೂವಿನ ಎಸಳುಗಳು ಎದ್ದು ಕಾಣಲು ಹಾಕುತ್ತಾರೆ. ವೃತ್ತಾಕಾರವಾಗಿ ಕೆಂಪು, ಪಚ್ಚೆ ಬಣ್ಣಗಳನ್ನು ಹೂವಿನ ವಿನ್ಯಾಸಕ್ಕೆ ಬಳಸಿದಾಗ ಅದರ ಅಂದ ಹೆಚ್ಚುತ್ತದೆ. ಇದೇ ಜಾಗದಲ್ಲಿ ಹರಳುಗಳನ್ನು ಹಾಕಬಹುದು. ಆಗ ಸ್ವಲ್ಪ ಭಾರವಾಗುತ್ತದೆ. ಹಾಗಾಗಿ ಎನಾಮಲ್ ಪೇಂಟ್‌ನ ಬಳಕೆ ಜಾಸ್ತಿ. ಕೆಲವರಿಗೆ ಕಾಲ್ಗೆಜ್ಜೆ ಧರಿಸಲು ಇಷ್ಟವಿರುವುದಿಲ್ಲ. ಆದರೂ ನಡೆಯುವಾಗ ಘಲ್ ಘಲ್ ನಿನಾದ ಬಹಳ ಹಿತವಾಗಿರುತ್ತದೆ. ಅಂಥವರು ಈ ಕೀ ಚೈನ್‌ನಲ್ಲೇ ಗೆಜ್ಜೆಯನ್ನು ಪೋಣಿಸಿದ್ದನ್ನು ಧರಿಸಬಹುದು. ಇದು ಕಿವಿಗೆ ಹಿತವಾಗಿರುತ್ತದೆ, ನೋಡಲು ಮುದ ನೀಡುತ್ತದೆ. ಚೈನುಗಳನ್ನು ಒಳಗೊಂಡ ಕೀ ಬಂಚ್ ನೋಡಲು ಸುಂದರವಾಗಿರುತ್ತದೆ. 3, 4 ಎಳೆಯ ಚೈನ್‌ಗಳು ಪದಕದಿಂದ ಹೊರಗೆ ಒಂದು ಅದರ ಕೆಳಗೆ ಗೆಜ್ಜೆ, ಗುಂಡುಗಳನ್ನು ಅಳವಡಿಸಲಾಗಿರುತ್ತದೆ. ಚಿಕ್ಕದಾದ ಹಗುರದ ವಿನ್ಯಾಸದ್ದು ಚೊಕ್ಕವಾಗಿ ಸೊಂಟದ ಮೇಲೆ ನಿಲ್ಲುವುದು ಕಷ್ಟ. ಹೀಗಾಗಿ ಆಭರಣ ಸ್ವಲ್ಪ ಭಾರವಾಗಿದ್ದರೆ ಭದ್ರವಾಗಿ ನಿಂತು ಸೊಗಸಾಗಿ ಕಾಣುತ್ತದೆ. ಕೀಗಳು ಭದ್ರವಾಗಿರಬೇಕಾದರೆ ಸೊಂಟದ ಕೀ ಹುಕ್ ಹಾಗೂ ಅದರ ರಿಂಗ್ ಗಟ್ಟಿಯಾಗಿರಬೇಕು.

ಅಲಂಕಾರಿಕವಾಗಿಯೂ ಸೊಂಟಕ್ಕೆ ಹಲವಾರು ಆಭರಣಗಳಿವೆ. ಸೊಂಟದ ಪಟ್ಟಿ ಎಲ್ಲರಿಗೂ ತಿಳಿದೇ ಇದೆ. ಇದನ್ನೂ ಅಷ್ಟೆ ಕುತ್ತಿಗೆಗೆ ಹಾಕುವ ಸರವನ್ನು ಸೊಂಟಕ್ಕೂ ಬಟ್ಟೆಯ ಮೇಲಿಂದಲೂ ಒಳಗೆ ಚರ್ಮಕ್ಕೆ ತಾಗುವಂತೆಯೂ ಧರಿಸಬಹುದು. ಗುಂಡಾಗಿರುವ ಮಣಿಗಳದ್ದಾದರೆ ಬಹಳ ಸ್ಟೈಲಿಶ್ ಆಗಿ ಕಾಣುತ್ತದೆ. ಚಪ್ಪಟೆಯಾದರೂ ಸಾಂಪ್ರದಾಯಿಕ ಲುಕ್ ಕೊಡುತ್ತದೆ. ಲೆಹೆಂಗಾ, ಇತರೆ ಸ್ಕರ್ಟ್‌ಗಳಿಗೆ ಇದನ್ನು ಬಟ್ಟೆಯ ಮೇಲಿಂದ ಧರಿಸಬಾರದು. ಆಭರಣಗಳು ಚರ್ಮದ ಮೇಲಿದ್ದರೆ ಬಲು ಹೊಳಪಿನಿಂದ ಕಾಣುತ್ತದೆ.

## ಜುಮುಕ ಕೀ ಬಂಚ್

ಕಿವಿಯೋಲೆ ಜೊತೆಗೆ ಜುಮುಖಿ, ಬಹಳ ಹಳೆಯ ಸಂಪ್ರದಾಯದ ಆಭರಣ. ಜುಮುಕವನ್ನು ಪೆಂಡೆಂಟ್ ಆಗಿಯೂ ಧರಿಸುತ್ತಾರೆ. ಇದೀಗ ಹೊಸ ಫ್ಯಾಷನ್ 3, 4 ಜುಮುಖಿಗಳನ್ನು ಒಂದರ ಕೆಳಗೆ ಒಂದರಂತೆ ಜೋಡಿಸಿ ಅದಕ್ಕೊಂದು ಹುಕ್ ಅಳವಡಿಸಿ ಸೊಂಟಕ್ಕೆ ಆಭರಣವಾಗಿ ಧರಿಸುವುದು.

## ಲೋಲಾಕ್ ಕೀ ಬಂಚ್

ಕಿವಿಯಲ್ಲಿ ಲೋಲಾಕ್ ಶೋಭಿಸುವಂತೆ ಸೊಂಟದಲ್ಲೂ ಲೋಲಾಕ್, ಸೀರೆ ಬಾರ್ಡರ್ ಮೇಲೆ ಬಹಳ ಸೊಗಸಾಗಿ ಕಾಣುತ್ತದೆ. ಬಾರ್ಡರ್ ಚಿಕ್ಕದಾಗಿದ್ದು ಒಳಭಾಗಕ್ಕೆ ಹೋಗಿದ್ದರೂ ಸರ ಅಂದವಾಗಿರುತ್ತದೆ. ಈಗಿನ ಲೆಹೆಂಗಾಗಳಿಗೂ ಸೊಂಟದಲ್ಲಿ ಇದನ್ನು ಸಿಕ್ಕಿಸಿದಲ್ಲಿ ಅಂದವಾಗಿರುತ್ತದೆ. ನಡೆಯುವಾಗ ‘ಸಿಂಹಕಟಿ’ಗೆ ಅಪರೂಪದ ಸೌಂದರ್ಯವನ್ನು ನೀಡುತ್ತದೆ.

## ಬೆಳ್ಳಿ ಚೈನ್ ಕೀ ಬಂಚ್

ವಾಚ್, ಉಂಗುರಗಳಲ್ಲಿ ಇಳಿ ಬಿಟ್ಟ ಚೈನ್‌ಗಳು ಇರುವಂತೆ ಇದರಲ್ಲೂ ಇಳಿ ಬಿಡಬಹುದು. 3, 4 ಎಳೆಗಳು ಸೊಂಟದಲ್ಲಿ ಇದ್ದಾಗ ಅದ್ಭುತವಾಗಿ ಕಾಣುತ್ತದೆ. ಇಂದು ಕುವರಿಯವರಿಗೆ ಆಭರಣದಲ್ಲಿ ಆಸಕ್ತಿ ಹೆಚ್ಚು. ಇದಕ್ಕೆ ಮಾಪ್ ಅಳವಡಿಸಿ ಧರಿಸಿದಾಗ ಸೊಗಸಾಗಿರುತ್ತದೆ. ಬೆಳ್ಳಿ, ಚಿನ್ನ ನಕಾರಾತ್ಮಕ ಕಿರಣಗಳು ನಮ್ಮ ದೇಹಕ್ಕೆ ಬರದಂತೆ ತಡೆದು ಸಹಕರಿಸುತ್ತವೆ.

## ಬಂಗಾರ ಪದಕದ ಕೀ ಬಂಚ್

ಸೊಂಟದ ಕೀ ಬಂಚ್ ಬಂಗಾರದ್ದು ಧರಿಸಬಹುದು. ಬಂಗಾರದ್ದು ನಿಮ್ಮಲ್ಲಿರುವ ಪೆಂಡೆಂಟ್‌ಗೆ ಹುಕ್ ಬಳಸಿ ಧರಿಸಬಹುದು. ಅದರೊಂದಿಗೆ ಒಂದು ಭದ್ರವಾದ ರಿಂಗ್ ಅನ್ನು ಅಳವಡಿಸಿದಾಗ ಅದರಲ್ಲಿ ಕೀಗಳನ್ನು ಹಾಕಿ ಇಟ್ಟುಕೊಳ್ಳಬಹುದು. ಮದುವೆ ಕಾರ್ಯಕ್ರಮಗಳಿಗೆ ಕೀಗಳನ್ನು ನಮ್ಮಲ್ಲೇ ಪರ್ಸ್‌ನ ಸಹಾಯ ಇಲ್ಲದೆ ಬಳಸಲು ಅನುಕೂಲ. ಡಿಜಿಟಲ್ ಯುಗ ಆದರೂ ಕೀಗಳು ನಿತ್ಯ ಜೀವನದಲ್ಲಿ ಅತ್ಯಗತ್ಯ.